# ಆಹಾ ಸುದ್ದಿ!

★ ಸಸಿತೋಟ



ಈ ಅಳಿಲಿನ ಗತ್ತು ನೋಡಿ. ಮಳೆಯಲ್ಲಿ ಆಟಿಕೆ ಕೊಡೆ ಹಿಡಿದು ಕ್ಯಾಮೆರಾಗೆ ಪೋಸ್ ಕೊಟ್ಟಿದೆ. ಇದೇನೂ ಸಾಕಿದ ಅಳಿಲು ಅಲ್ಲ. ಇಂಗ್ಲೆಂಡ್‌ನ ಛಾಯಾಚಿತ್ರಗ್ರಾಹಕ ಮ್ಯಾಕ್ಸ್ ತನ್ನ ತೋಟದಲ್ಲಿ ಈ ಕೊಡೆಗೆ ಪೀನಟ್ ಬಟರ್ ಬಳಿದು ಸೂರ್ಯಕಾಂತಿ ಬೀಜ ಉದುರಿಸಿದ್ದನಂತೆ. ಆತನ 'ಛತ್ರಿ' ಬುದ್ಧಿ ಪಾಪದ ಅಳಿಲಿಗೆ ಹೇಗೆ ಗೊತ್ತಾಗಬೇಕು!

ಹೆಚ್ಚಿನ ಜೀವಿಗಳಲ್ಲಿ ಸಂತಾನೋತ್ಪತ್ತಿಯಲ್ಲಿ ಗಂಡಿನ ಕೊಡುಗೆಯೆಂದರೆ ವೀರ್ಯಾಣು ಮಾತ್ರ. ಹೀಗಿರುವಾಗ ವಿಕಾಸದ ಹಂತಗಳಲ್ಲಿ ಉತ್ತಮ ಆಯ್ಕೆ ಬೇಡುವ ಪ್ರಕೃತಿ ಇನ್ನೂ ಯಾಕೆ ಗಂಡನ್ನು ಬದುಕಲು ಬಿಟ್ಟಿದೆ ಎಂಬ ವಿಜ್ಞಾನಿಗಳ ಪ್ರಶ್ನೆಗೆ ಈಗ ಉತ್ತರ ಲಭಿಸಿದೆಯಂತೆ. ಲೈಂಗಿಕ ಕ್ರಿಯೆ ಇಲ್ಲದೇ ಸಂತಾನೋತ್ಪತ್ತಿ ಮಾಡುವ ಕೆಲವು ವರ್ಗಗಳಲ್ಲಿ ಆರೋಗ್ಯ ಸಮಸ್ಯೆ ಇರುವ ಜೀವಿಗಳು ಹುಟ್ಟುತ್ತವಂತೆ. ಗಂಡಿನ ಸಹಕಾರದಿಂದ ನಡೆಯುವ ಸಂತಾನೋತ್ಪತ್ತಿಯಲ್ಲಿ ಆರೋಗ್ಯಕರ ಜೀನ್ಸ್ ಇರುವ ಗಂಡನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರುತ್ತದೆ ಎಂದಿದ್ದಾರೆ ಬ್ರಿಟಿಷ್ ವಿಜ್ಞಾನಿಗಳು. ಈ ಮೂಲಕ ಗಂಡು ಈ ಭೂಮಿಯ ಮೇಲಿರಲು ಲಾಯಕ್ಕು ಎಂಬುದು ಸಾಬೀತಾದಂತಾಗಿದೆ.



ನವ ದೆಹಲಿಯಲ್ಲಿ ಬಿಸಿಲಿನ ಝಳಕ್ಕೆ ರಸ್ತೆಯ ಡಾಂಬರು ಕರಗಿ ವಿಚಿತ್ರ ಕಲೆ ಸೃಷ್ಟಿಯಾಗುತ್ತಿದೆ. ಸದ್ಯ ಬಿಸಿಲ ಬೇಗೆಗೆ ಹೊರಬರುವ ಧೈರ್ಯ ಯಾರಿಗೂ ಸಾಲದು, ಇಲ್ಲದಿದ್ದರೆ ಇಂತಹ ಕಲೆಗೆ ಬೆಲೆಯೂ ಬರುತ್ತಿತ್ತು.

ಅಮೆರಿಕಾದ ಇಲಿನಾಯ್ಸ್‌ನ ರುತ್ ಮತ್ತು ಲಿಯೊ ಝಾಂಜರ್‌ಗೆ ಇತ್ತೀಚೆಗೆ 100ನೇ ಮೊಮ್ಮಗುವನ್ನು ನೋಡುವ ಭಾಗ್ಯ ಲಭಿಸಿತಂತೆ. 59ನೇ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡ ಈ ದಂಪತಿಗೆ 12 ಮಕ್ಕಳು. ಒಟ್ಟು 53 ಮೊಮ್ಮಕ್ಕಳು, 46 ಮಿಮ್ಮಕ್ಕಳು, ಒಬ್ಬ ಮರಿ ಮೊಮ್ಮಗನಂತೆ. ಕುಟುಂಬದ ಹೆಚ್ಚು ಮಂದಿ ಸದಸ್ಯರು ಅದೇ ಊರಿನಲ್ಲಿ ವಾಸಿಸುತ್ತಿದ್ದು, ಕೌಟುಂಬಿಕ ಸಮಾರಂಭಕ್ಕೆ ದೊಡ್ಡ ಹಾಲ್ ಬಾಡಿಗೆಗೆ ಪಡೆಯಬೇಕಂತೆ. ಆಸ್ತಿ ಹಂಚಿಕೆಯ ಜಗಳವಿಲ್ಲ, ಹೀಗೇ ಕುಟುಂಬ ಬೆಳೆಯಲಿ ಎಂದು ಝಾಂಜರ್ ದಂಪತಿ ನಕ್ಕಿದ್ದಾರಂತೆ.



ಜಪಾನಿನ ಸೆನ್ಸೋಜಿಯಲ್ಲಿ ಮಕ್ಕಳನ್ನು ಜೋರಾಗಿ ಅಳಿಸುವ ಸ್ಪರ್ಧೆ ನಡೆಯಿತು. ಸುಮೋ ಕುಸ್ತಿಪಟುಗಳು ಮಗುವನ್ನು ಕೈಯಲ್ಲಿ ಹಿಡಿದರೆ ರೆಫ್ರಿ ಚಿತ್ರವಿಚಿತ್ರವಾಗಿ ಮುಖ ತಿರುಗಿಸುತ್ತ, ಜೋರಾಗಿ ಸದ್ದು ಮಾಡುತ್ತ ಮಗುವನ್ನು ಅಳಿಸುತ್ತಾನಂತೆ. ಆದರೆ ಹಿಂದೆ ರೆಫ್ರಿಗೆ, ಸುಮೋ ಪಟುವಿಗೆ ಬಹುಮಾನ ಸಿಗುತ್ತಿತ್ತು, ಜೋರಾಗಿ ಅತ್ತ ಮಗುವಿಗೆ ಆಯಸ್ಸು ಹೆಚ್ಚು ಎಂದು ಖುಷಿಪಡುತ್ತ ಹೋಗುತ್ತಿದ್ದರು ತಂದೆ- ತಾಯಿ. ಈಗ ಜೋರಾಗಿ ಅತ್ತ ಮಗುವಿಗೆ ಬಹುಮಾನವಂತೆ. ಕೊನೆಗೂ ನ್ಯಾಯಕ್ಕೇ ಜಯ ದೊರಕಿತಲ್ಲ.

ನ್ಯೂಜಿಲೆಂಡ್‌ನ ಡ್ಯುನೆಡಿನ್‌ನಲ್ಲಿ ಸಾವಿರಾರು ಕುರಿಗಳು ರಸ್ತೆಯನ್ನು ಬ್ಲಾಕ್ ಮಾಡಿದ ದೃಶ್ಯವಿದು. ಅರ್ಧ ಮೈಲಿಗೂ ಹೆಚ್ಚು ದೂರದವರೆಗೆ ಕುರಿಗಳು ರಸ್ತೆಯ ತುಂಬ ಸಾಗಿ ವಾಹನಗಳಿಗೆ ದಾರಿ ಬಿಡಲಿಲ್ಲವಂತೆ. ಬೆಂಗಳೂರಿನಲ್ಲಿ ರಸ್ತೆ ಬ್ಲಾಕ್ ಮಾಡಲು ಕುರಿಗಳು ಬೇಕಾಗಿಲ್ಲ ಅಂತೀರಾ!

